# ಸವಿ

■ ಡಾ. ಕೆ.ಬಿ. ರಂಗಸ್ವಾಮಿ

ಕಲೆ: ಸಂತೋಷ್ ಸಸಿಹಿತ್ಲು

ರಸಪೂರಿ ಮಾವಿಗೂ ಮಿಗಿಲು
ಕಲ್ಲುಸಕ್ಕರೆಯ ಸವಿ
ಕಲ್ಲುಸಕ್ಕರೆಗೂ ಮಿಗಿಲು
ಕೋಲುಬೆಲ್ಲದ ಸವಿ

ಕೋಲುಬೆಲ್ಲಕ್ಕೂ ಮಿಗಿಲು
ಹಾಲುಜೇನಿನ ಸವಿ
ಹಾಲುಜೇನಿಗೂ ಮಿಗಿಲು
ಗೆಳೆಯರೊಡನಾಟದ ಸವಿ

ಗೆಳೆಯರೊಡನಾಟಕ್ಕೂ ಮಿಗಿಲು
ಗುಬ್ಬಿಎಂಜಲ ಸವಿ
ಗುಬ್ಬಿಎಂಜಲಿಗೂ ಮಿಗಿಲು
ಅಪ್ಪನ ಸಾನ್ನಿಧ್ಯದ ಸವಿ

ಅಪ್ಪನ ಸಾನ್ನಿಧ್ಯಕ್ಕೂ ಮಿಗಿಲು
ಅಜ್ಜಿಯ ಕಥೆಯ ಸವಿ
ಅಜ್ಜಿಯ ಕಥೆಗೂ ಮಿಗಿಲು
ಅಕ್ಕನ ಲಾಲಿಯ ಸವಿ

ಅಕ್ಕನ ಲಾಲಿಗೂ ಮಿಗಿಲು
ಆಕೆಯ ಮುತ್ತಿನ ಸವಿ
ಆಕೆಯ ಮುತ್ತಿಗೂ ಮಿಗಿಲು
ಅಮ್ಮನ ತುತ್ತಿನ ಸವಿ!





## ಕುಂಚ ಪ್ರಪಂಚ



**ಪೂರ್ಣಚಂದ್ರ ಪಿ.ಎಂ.**
5ನೇ ತರಗತಿ, ಬಾಲಭಾರತಿ
ಹಿರಿಯ ಪ್ರಾಥಮಿಕ ಶಾಲೆ
ಬಂದಗದ್ದೆ, ಸಾಗರ

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in